

He's Waiting
ನಿನಗಾಗಿ
A story by
Akshara Hegde
Sweet...for some
Better...for some othe

this story is

# ನಿನಗಾಗಿ...

ಕೊನೆಗೂ ಇವನನ್ನು ನೋಡಲು ಅವಳು ಬರುತ್ತಿದ್ದಾಳೆ. ಇವನ ಎಂಟು ವರ್ಷದ ನಿರೀಕ್ಷೆ ಹುಸಿಯಾಗಲಿಲ್ಲ. ಕೈಯಲ್ಲಿ ಗುಲಾಬಿ ಹಿಡಿದ ಗುಲಾಬಿ ಕೆನ್ನೆಯ ಸುಂದರಿ ಮೆಲ್ಲಗೆ ಹೆಜ್ಜೆ ಹಾಕುತ್ತಾ ಇವನ ಸನಿಹ ಬರುತ್ತಿದ್ದಾಳೆ. ಇವನ ಮತ್ತು ಅವಳ ನಡುವಿನ ಅಂತರ ಕಡಿಮೆಯಾಗುತ್ತಾ ಬಂದಂತೆ ಸಂತೋಷದ ಜೊತೆಗೆ nervousness ಕೂಡ ಜಾಸ್ತಿಯಾಗುತ್ತಿದೆ. ಅವಳು ಇವನೆದುರು ಬಂದು ನಿಂತೇ ಬಿಟ್ಟಿದ್ದಾಳೆ. ಅವಳ ಕೈಗಳೂ ಕೂಡ ನಡುಗುತ್ತಿವೆ. ಬಾಯಿಯಿಂದ ಸ್ವರವೇ ಹೊರಡುತ್ತಿಲ್ಲ. ಮಾತನಾಡುವ ಸಾವಿರಾರು ಪದಗಳು ಹೃದಯದಿಂದ ದುಮ್ಮಿಕ್ಕಿ ಬರುತ್ತಿದ್ದರೂ ಒಂದೇ ಒಂದು ಶಬ್ದವೂ ಹೊರಬರುತ್ತಿಲ್ಲ. ಮುಂಗುರುಳು ಅವಳ ಕೆನ್ನೆಯ ಮೇಲೆ ಹರಿದಾಡುತ್ತಿದೆ.... ಸೂರ್ಯನನ್ನು ಮೋಡಗಳು ಅರ್ಧ ಮರೆಮಾಡಿದಂತೆ. ಆದಿತ್ಯನ ಎದುರು ಸ್ವಾತಿ ಬಂದು ನಿಂತಿದ್ದಾಳೆ.

ಕಾಲೇಜು ಪ್ರಾರಂಭವಾದ ಐದು ದಿನಗಳ ನಂತರ ಅತ್ತ ಮುಖ ಮಾಡಿದ್ದ. 3-4 ಹಳೆಯ ಸ್ನೇಹಿತರನ್ನು ಬಿಟ್ಟರೆ ಉಳಿದವರೆಲ್ಲ ಹೊಸಬರು. ಪರಿಚಯವಿದ್ದ ಮೂವರು ಗೆಳೆಯರೊಂದಿಗೆ ಹರಟುತ್ತಾ ಕಾಲೇಜಿನ ಕಾರಿಡಾರಿನಲ್ಲಿ ನಿಂತಿದ್ದ ಆದಿತ್ಯ. ಜೋಕುಗಳನ್ನು ಹೇಳುತ್ತಾ ನಗುತ್ತಿರುವಾಗಲೇ ಎಂಟ್ರೀ ಕೊಟ್ಟಿದ್ದಳು ಮೂಗುತಿ ಸುಂದರಿ ಸ್ವಾತಿ. ಬಿಳಿ ಚೂಡಿದಾರದಲ್ಲಿ ಹುಣ್ಣಿಮೆ ಚಂದ್ರನಿಗಿಂತ ತುಸು ಜಾಸ್ತಿಯೇ ಬೆಳಗುತ್ತಿದ್ದಳು. ಆದಿತ್ಯನ ದೃಷ್ಟಿ ಅವಳ ಮೇಲೆ ಬಿತ್ತು. ಬೀಳಲೇಬೇಕು ಅಲ್ವೇ? ಅವಳತ್ತಲೇ ಕಣ್ಣನ್ನೂ ಮಿಟುಕಿಸದೆ ನೋಡತೊಡಗಿದ. ಇವನ ಕಡೆಗೆ ದೃಷ್ಟಿಯೂ ಹರಿಸದೆ ತನ್ನ ಸ್ನೇಹಿತೆಯೊಂದಿಗೆ ಮುನ್ನಡೆದಳು. ಅವಳು ಕ್ಲಾಸಿನ ಒಳಗೆ ಹೋಗುವಾಗ ಕೊನೆಯ ಕ್ಷಣದಲ್ಲಿ ಗಮನಿಸಿದ... ಬ್ಯಾಗಿಗೆ ತಗುಲಿಕೊಂಡಿದ್ದ ಆ ಕೆಂಪು ಬಣ್ಣದ ಕೀ-ಚೈನ್.

ಹೈಸ್ಕೂಲಿನಲ್ಲೇ ತರಗತಿಗೆ ಸರಿಯಾಗಿ ಕೂರದೆ ಇದ್ದವನು ಈಗ ಕಾಲೇಜಿನಲ್ಲಿ ತರಗತಿಯೇ ನೀನೇ ಗತಿ ಎಂದು ಕೂರತೊಡಗಿದನು. ಪಾಠ ಕೇಳಲು ಅಲ್ಲ. ಸ್ವಾತಿಯನ್ನು ನೋಡಲು. ಇವನೊಳಗೆ ಅವಳ ಮೇಲೆ ಪ್ರೀತಿ ಬೆಳೆಯಿತು. ಅವಳು ತರಗತಿಯಲ್ಲಿಲ್ಲದ ಸಮಯದಲ್ಲಿ ಕೀ-ಚೈನ್ ಇವನ ಕೈ ಸೇರಿತ್ತು. ಪ್ರೀತಿಯ ಹಳ್ಳದಲ್ಲಿ ಬಿದ್ದಮೇಲೆ ಹುಡುಗಿಗೆ ಸೇರಿದ ಸಣ್ಣ-ಪುಟ್ಟ ವಸ್ತುಗಳೂ ನಮಗೆ important ಅಲ್ವೇ?

ಮೂರು ವರ್ಷಗಳು ಕಳೆದದ್ದು ಗೊತ್ತೇ ಆಗಲಿಲ್ಲ. ಇದು ನಿಜ ಬಿಡಿ. Albert Einstein ಹೇಳಿಲ್ವೆ, 'ಕಾದಿರುವ ಕಬ್ಬಿಣದ ಹಲಗೆಯ ಮೇಲೆ ಒಂದು ನಿಮಿಷ ಕುಳಿತರೂ ಕೂಡ ವರ್ಷದಂತೆ ಭಾಸವಾಗುತ್ತದೆ. ಪಕ್ಕದಲ್ಲಿ ಹುಡುಗಿಯಿದ್ದರೆ ವರ್ಷಗಳೂ ನಿಮಿಷಗಳಾಗಿ ತೋರುತ್ತವೆ. ಇದೇ ಥಿಯರೀ ಆಫ್ ರಿಲೇಟಿವಿಟೀ' ಅಂತ.

ಕೊನೆಯ ಎಕ್ಸಾಮ್ ದಿನ ಸ್ವಾತಿಯ ಬಳಿ ಎಲ್ಲವನ್ನೂ ಹೇಳಿಬಿಡಬೇಕೆಂದು ಪರೀಕ್ಷೆಗಿಂತ ಪ್ರಪೋಸ್ ಮಾಡಲು ಹೆಚ್ಚು ತಯಾರಾಗಿ ಬಂದ. ಎಲ್ಲರಿಗಿಂತ ಮೊದಲೇ ಪರೀಕ್ಷಾ ಕೊಠಡಿಯಿಂದ ಹೊರಬಂದು ಕಾರಿಡಾರಿನಲ್ಲಿ ಅವಳು ಹೊರಬರುವುದನ್ನೇ ಕಾಯುತ್ತಾ ನಿಂತಿದ್ದ. ಒಂದೆಡೆ ಅವಳಿಗೆ ಹೇಳಲೂ ಭಯ. ಇನ್ನೊಂದೆಡೆ ಈಗ ಹೇಳದೆ ಇದ್ದರೆ ಮುಂದೆ ಅವಳನ್ನು ಭೇಟಿಯಾಗಲು ಆಗುವುದೋ ಇಲ್ಲವೋ ಎಂಬ ಭಯ.

ಸ್ವಾತಿ ಹೊರಬಂದಳು. ಅವಳ ಹೆಸರು ಹಿಡಿದು ಕರೆಯಹೋದ. Shit... ಅವಳೊಡನೆ ಪೂಜಾ ಕೂಡ ಬರಬೇಕೆ..? ಸ್ವಾತಿ ಇವನೆದುರೇ ಹಾದುಹೋದಳು. ಅವಳು ಇವನಿಂದ ಹತ್ತು ಹೆಜ್ಜೆ ಮುಂದೆ ಹೋಗಿರಬಹುದು, ಧೈರ್ಯ ಮಾಡಿ ಆಗಿದ್ದಾಗಲಿ ಎಂದು 'ಸ್ವಾತಿ... Excuse me' ಎಂದ. ಅವಳಿಗೆ ಇವನು ಕರೆದಿದ್ದು ಕೇಳಿಸಿದರೆ ತಾನೇ...! ಕೆಲವೊಮ್ಮೆ ಹುಡುಗಿಯರು ಜಾಣ-ಕಿವುಡು ಪ್ರದರ್ಶಿಸುವುದೂ ಉಂಟು. ಮತ್ತೊಮ್ಮೆ ಮೊದಲಿಗಿಂತ ಜೋರಾಗಿ ಕರೆದ. ಸ್ವಾತಿ ತನ್ನ ಹೆಸರನ್ನು ಕರೆದವರು ಯಾರೆಂದು ತಿರುಗಿ ನೋಡಿದಳು. ಪೂಜಾ ಇದಕ್ಕೆ ಗಮನವೀಯದೆ ಮುಂದೆ ಹೋಗಿದ್ದು ಇವನಿಗೆ ಸ್ವಲ್ಪ ಸಮಾಧಾನ ತಂದಿತು.

ಆದರೆ ಕೆಲವೇ ನಿಮಿಷಗಳಲ್ಲಿ patho song ಕೇಳಬೇಕಾದ situation create ಆಗುತ್ತದೆಯೆಂದೂ, ಆ ರೀತಿ ಆಗುವುದರಿಂದಾಗಿಯೇ ಮುಂದೊಂದು ದಿನ ಅವನಿಗಾಗಿ ಇಡೀ ದೇಶವೇ ಪ್ರಾರ್ಥಿಸುತ್ತದೆಯೆಂದೂ ಆಗ ಅವನಿಗೆ ತಿಳಿದಿರಲಿಲ್ಲ. ತಿಳಿಯುವಂತೆಯೂ ಇರಲಿಲ್ಲ. ಮೇಲೆ ಕುಳಿತು ಆಡಿಸುವವ ಅಚ್ಚುಕಟ್ಟಾಗಿ ಎಲ್ಲವನ್ನೂ ಬರೆದು ಮುಗಿಸಿದ್ದ.

ಅವಳೆದುರು ಓಡಿ ಹೋಗಿ ನಿಂತು ಹೇಳಿದ, "ಸ್ವಲ್ಪ ಮಾತಾಡ್ಬೇಕಿತ್ತು." "ಓಹ್.. ಟೆಲ್ ಮೀ ", ತನ್ನದೇ ಆದ ಗತ್ತಿನ ಧ್ವನಿಯಲ್ಲಿ ಹೇಳಿದಳು. ಉಫ್.. ಎದೆಯಲ್ಲಿ ಡವಡವ ಜಾಸ್ತಿಯಾಯಿತು. ಜೊತೆಗೆ ಅವಳ ಧ್ವನಿಯ ಧಾಟಿ ಬೇರೆ ಗರಂ ಆಗಿದೆ. ಆದರೂ ಅವಕಾಶ ಕೈತಪ್ಪಿ ಹೋಗಲು ಬಿಡಬಾರದೆಂದು ಚೂರುಪಾರು ಉಳಿದಿದ್ದ ಧೈರ್ಯವನ್ನು ಒಗ್ಗೂಡಿಸಿಕೊಂಡು ಮೊಣಕಾಲೂರಿ ಕುಳಿತು ಕಾಲೇಜಿನ ಹೂತೋಟದಿಂದ ಕಿತ್ತು ತಂದಿದ್ದ ಹೂವೊಂದನ್ನು ಹೂವನ್ನು ಅವಳೆದುರು ಹಿಡಿದು, " ಅದು.. ಅದು.." ಮಾತುಗಳೇ ಹೊರಬರುತ್ತಿಲ್ಲ. ನನಗೂ ಹೀಗೆ ಆಗಿತ್ತು ಬಿಡಿ. Vivaದಲ್ಲಿ ಉತ್ತರಿಸುವಾಗಲೂ ಕೂಡ ನನಗೆ ಹೀಗೆ ಆಗಿರ್ಲಿಲ್ಲ.

ಉಫ್.. ಅಂತೂ ಬಂದ ಫ್ಲೋದಲ್ಲಿ ಹಿಂದಿನ ದಿನ ರಾತ್ರಿ ಕಂಠಪಾಠ ಮಾಡಿದ್ದ dialgueಗಳೆಲ್ಲವನ್ನೂ ಕಣ್ಣು ಮುಚ್ಚಿಕೊಂಡು ಒಂದೇ ಉಸಿರಿನಲ್ಲಿ ಹೇಳಿ ಮುಗಿಸಿದ್ದ. ಚಂದ್ರನ ಮುಖದಲ್ಲಿ ಸೂರ್ಯನ ಬೆಂಕಿ ಕಾಣಿಸುತ್ತಿತ್ತು. ಅವಳು ಸಿಟ್ಟಿನಿಂದ ಕಿರುಚಿದಳು, "You are a classmate.. just a classmate. You '***were***'.. from tomorrow. ಅದು ಅಲ್ಲದೆ ನೀನು ಒಬ್ಬ formerನ ಮಗ. ನಿನ್ನನ್ನ love ಮಾಡಿದ್ರೆ ನನಗೇನೋ ಸಿಗುತ್ತೆ. Your are beggar.. poor fellow. Go and find another beggar like you.." ಇನ್ನೊಂದು ವಿಷಯವನ್ನು ಹೇಳಲು ಮರೆತಿದ್ದೆ, ಆದಿತ್ಯ ನೋಡಲು ರಾಜಕುಮಾರನೇ ಆಗಿದ್ದರೂ ಅವನು ಬಡಕುಟುಂಬದವನು. ಅವಳು businessman ಮಗಳು. ಕೋಟ್ಯಾಂತರ ರೂಪಾಯಿಗಳ ಆಸ್ತಿಗೆ ಹಕ್ಕುದಾರಳು ಇವಳೇ ಅದೂ ಅಲ್ಲದೇ ಇವನು 'ರಿಚ್ ಅಂಕಲ್' ಅಲ್ವಲ್ಲ. ಇದಕ್ಕಿಂತ ಹೆಚ್ಚಾಗಿ ಮೇಲೆ ಒಂದು ಮಾತನ್ನು ಹೇಳಿದ್ದೆ, ಮೇಲೆ ಕುಳಿತು ಆಡಿಸುವವನು ಎಲ್ಲವನ್ನೂ ಬರೆದು ಇಟ್ಟಿದ್ದಾನೆ ಎಂದು. ಸ್ವಾತಿ ಸುತ್ತಲೂ ಸೇರಿದವರತ್ತ ಧುರಧುರನೆ ನೋಡುತ್ತಾ ಹೊರಟುಹೋದಳು. ಸುತ್ತಲಿದ್ದವರು ಇವನನ್ನೇ ನೋಡುತ್ತಿದ್ದರು. ಆದಿತ್ಯ ಎದ್ದು ನಿಂತ. ಹೂವಿನ ಮೇಲೆ ಬಿದ್ದಿದ್ದ ಕಣ್ಣೀರಿನಲ್ಲಿ ಅವಳು ಹೋಗುತ್ತಿದ್ದ ಪ್ರತಿಬಿಂಬ ಮೂಡಿತ್ತು.

ಇದಾಗಿ 8 ವರುಷಗಳು ಉರುಳಿದವು. ಆದಿತ್ಯನೀಗ ಸಾಮಾನ್ಯವಾದ ಒಂದು ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಸ್ವಾತಿಯ ಸುಳಿವಿರಲಿಲ್ಲ. ಎಲ್ಲಿಯೂ ಕಾಣಸಿಕ್ಕಿರಲಿಲ್ಲ. ಅವಳ ನೆನಪಿನಲ್ಲಿಯೇ ಕವಿತೆಗಳನ್ನು ಗೀಚುತ್ತಿದ್ದ. ಅವಳನ್ನು ಬಣ್ಣಿಸಿ ಸಾಲುಗಳನ್ನು ಹೆಣೆದು ಹಾಡನ್ನು ರಚಿಸಿ ಹಾಡುತ್ತಿದ್ದ. ಅವಳು ಎಲ್ಲಿರುವಳೆಂದು ಇವನಿಗೆ ತಿಳಿದಿರಲಿಲ್ಲ. ಆದರೆ ಮುಂದೊಂದು ದಿನ ಅವಳನ್ನು ಭೇಟಿಯಾಗುವ ಸಂದರ್ಭ ಬರಬಹುದು ಎಂಬ ಭರವಸೆಯಲ್ಲಿಯೇ ಜೀವನ ಸಾಗಿಸುತ್ತಿದ್ದ. ಅವನ ನಿರೀಕ್ಷೆಗೆ ಅಂತ್ಯ ಕೆಲವೇ ದಿನಗಳಲ್ಲಿ ಆಗುವುದರಲ್ಲಿತ್ತು. He's waiting for that day...

ಅಂದು ಶುಕ್ರವಾರ. ವಾರದ ಕೊನೆಯ ಕೆಲಸದ ದಿನವೆಂದು ಸ್ವಲ್ಪ ಉತ್ಸಾಹದಿಂದಲೇ ಆಫೀಸಿನತ್ತ ನಡೆದು ಹೊರಟಿದ್ದ. ಅವನು ಹೋಗುವ ದಾರಿಯಲ್ಲಿದ್ದ Police Head Quarterನಿಂದ 100ಅಡಿ ದೂರವಿರುವಾಗಲೇ 2 ಟಾಟಾ ಸುಮೋಗಳಲ್ಲಿ ಆಗಮಿಸಿದ್ದರು ರಕ್ತಚರಿತ್ರೆಯನ್ನು ಬರೆಯಲು ಹೊರಟ 8 ಜನ ಉಗ್ರಗಾಮಿಗಳು. ಗೇಟ್ ಎದುರು ನಿಂತಿದ್ದ ಇಬ್ಬರು constablesಗಳತ್ತ ಗುಂಡು ಹಾರಿಸುತ್ತ ವಾಹನಗಳನ್ನು Head Quarterನ compoundನೊಳಗೆ ನುಗ್ಗಿಸಿದರು. ರಸ್ತೆಯ ಇಕ್ಕೆಲಗಳಲ್ಲಿ ನಡೆಯುತ್ತಿದ್ದ ಜನರೆಲ್ಲರೂ ಜೀವ ಉಳಿಸಿಕೊಳ್ಳಲೋಸುಗ ಆತುರದಲ್ಲಿ ದಿಕ್ಕಾಪಾಲಾಗಿ ಓಡತೊಡಗಿದರು. ಆದರೆ ಆದಿತ್ಯ ಓಡಿದ್ದು Police Stationನ ವಿರುದ್ಧ ದಿಕ್ಕಿನಲ್ಲಲ್ಲ.

ಪೊಲೀಸ್ ಸಿಬ್ಬಂದಿ ಇನ್ನೂ ಎಚ್ಚೆತ್ತುಕೊಂಡಿರಲಿಲ್ಲ. ಹಠಾತ್ತಾಗಿ ನಡೆದ ಗುಂಡಿನ ದಾಳಿಗೆ ಸಿಲುಕಿದ್ದರು stationನ ಎದುರು ಹರಟುತ್ತಾ ನಿಂತಿದ್ದ ಐವರು constables. ಆದರೆ ಅಲ್ಲಿ ಇನ್ನೂ ಹೆಚ್ಚು ಜನರ ಪ್ರಾಣ ಹರಣವಾಗುತ್ತಿರಲಿಲ್ಲ. ಏಕೆಂದರೆ ಮೇಲಿದ್ದವನು ಬರೆದಿದ್ದು 8 ಜನ ಉಗ್ರಗಾಮಿಗಳನ್ನೂ ಸೇರಿಸಿ ಕೇವಲ ಇನ್ನು ಒಂಬತ್ತು ಜನರ ಬಲಿಯನ್ನು ಮಾತ್ರ....!

ನಾಲ್ವರು ಉಗ್ರರಿದ್ದ ಒಂದು ವಾಹನದತ್ತ ಓಡಿ ಬಂದಿದ್ದ ಆದಿತ್ಯ ಹುಲಿಯಂತೆ ಎಗರಿ windowನಿಂದ ಹೊರಗಿದ್ದ ಒಬ್ಬನ ತಲೆಯನ್ನು ಬಲವಾಗಿ ತಿರುಗಿಸಿದ್ದ. ಆ ಉಗ್ರನ ಕೈಯಲ್ಲಿದ್ದ ಗನ್ ಅನ್ನು ಕಸಿದುಕೊಂಡು ನೆಲಕ್ಕೆ ಜಿಗಿಯುವ ಮೊದಲು ಉಗ್ರನ ಭುಜದಲ್ಲಿ ನೇತಾಡುತ್ತಿದ್ದ ಗ್ರೇನೆಡ್ ಒಂದರ ಪಿನ್ನನ್ನು ಹಿಡಿದು ಎಳೆದಿದ್ದ. ವೇಗವಾಗಿ ಹೋಗುತ್ತಿದ್ದ ವಾಹನದಿಂದ ಬಿದ್ದ ರಭಸಕ್ಕೆ ಎಡಭುಜ ತರಚಿಹೋಗಿತ್ತು. ಇದಾವುದರ ಕಡೆಗೆ ಗಮನವೀಯದೆ ಮತ್ತೊಂದು ವಾಹನದತ್ತ ನುಗ್ಗಿದ. ಅಷ್ಟರಲ್ಲಿ ಮೊದಲನೇ ವಾಹನ ವಿಸ್ಫೋಟಗೊಂಡಿತ್ತು.

ಆ ವಾಹನದಲ್ಲಿದ್ದ ಇಬ್ಬರು ಉಗ್ರರು ಇವನತ್ತ ಗುಂಡಿನ ಮಳೆಗರೆದರು. ಸಾಲಾಗಿ ಹತ್ತಾರು ಬೆಂಕಿಯ ಉಂಡೆಗಳು ಆದಿತ್ಯನ ದೇಹದೊಳಗೆ ನುಗ್ಗಿದವು. ಅಷ್ಟರಲ್ಲಾಗಲೇ ಇವನ ಗನ್ ನಿಂದ ಹೊರಟಿದ್ದ ಗುಂಡುಗಳು ಅವರಿಬ್ಬರ ಹಣೆಯಲ್ಲಿ ತೂತನ್ನು ಕೊರೆದಿದ್ದವು. ಇನ್ನೆರಡು ಗುಂಡುಗಳು ಪೆಟ್ರೋಲ್ ಟ್ಯಾಂಕಿಗೆ ನುಗ್ಗಿ ಆ ವಾಹನಕ್ಕೆ ಅಂತ್ಯ ಹಾಡಿದ್ದವು. ಇಷ್ಟೆಲ್ಲಾ ಆಗಿದ್ದು ಕೇವಲ 59 ಸೆಕೆಂಡುಗಳ ಕಾಲ ಮಾತ್ರ.

ಹತ್ತಾರು ಗುಂಡುಗಳು ಇವನ ದೇಹದಲ್ಲಿ ಆಶ್ರಯ ಪಡೆದಿದ್ದರೂ ಯಾವುದೂ ಕೂಡ ಅಪಾಯಕಾರಿ ಸ್ಥಳಗಳಲ್ಲಿರಲಿಲ್ಲ.. ಒಂದನ್ನು ಹೊರತುಪಡಿಸಿ. ಹತ್ತಾರು ಜನರ ಪ್ರಾಣ ಉಳಿಸಲು ದುಷ್ಟಸಂಹಾರಕ್ಕಾಗಿ ಇವನನ್ನು ಆರಿಸಿದ್ದಕ್ಕಾಗಿ ಇವನಿಗೆ ತನ್ನ ಕೊನೆಯ ಮಾತನ್ನು ಹೇಳಲು ಅವಕಾಶ ಕೊಡುವುದು ಮೇಲಿದ್ದವನ ಕರ್ತವ್ಯವಲ್ಲವೆ...? ಜೊತೆಗೆ ಇವನ ಕಾಯುವಿಕೆಗೆ ಅಂತ್ಯ ಹಾಡುವ ಅವಶ್ಯಕತೆ ಇತ್ತು.

ನೆಲದ ಮೇಲೆ ಗಾಯಗೊಂಡು ಬಿದ್ದಿದ್ದ ಮೂವರು 'ನಮ್ಮನ್ನು ಬದುಕಿಸಿ, ಜೀವ ಉಳಿಸಿ' ಎಂದು ಕೈಯೆತ್ತಿ ಕರೆಯುತ್ತಿದ್ದರು. ಹೆಜ್ಜೆಯೆತ್ತಿಡಲೂ ಆಗದ ಆದಿತ್ಯ ನೋವಿನ ಛಾಯೆಯನ್ನೂ ಮುಖದ ಮೇಲೆ ತೋರಗೊಡದೆ ಅವರ ಬಳಿ ಕುಂಟುತ್ತಾ ಹೋಗಿ ಕುಳಿತು ಹೇಳಿದ, "ನಿಮಗೇನು ಆಗೋದಿಲ್ಲ. ಏನು ಆಗೋಲ್ಲ. ಐದೇ ನಿಮಿಷ...ambulance ಬರುತ್ತೆ. ಹೆದ್ರಬೇಡಿ' ಎಂದು ಸಾವಿನ ಕೊನೆಯ ಕ್ಷಣದಲ್ಲೂ ಮುಗುಳ್ನಗುತ್ತಾ ಉಸಿರುಬಿಗಿ ಹಿಡಿದು ಹೇಳಿದ. ಬಾಯಿಂದ ರಕ್ತ ಉಕ್ಕಿಬಂತು. ಇವನ ಬಾಯಿಂದ ನೋವಿನ ಆಕ್ರಂದನ ಹೊರಬರಲೇ ಇಲ್ಲ. ನೋವೆಲ್ಲವೂ ಎಡಗೈ ಮುಷ್ಟಿಯಲ್ಲಿ ಬಿಗಿಹಿಡಿದಿದ್ದ ವಸ್ತುವಿನಲ್ಲಿ ಲೀನವಾಗುತ್ತಿತ್ತು. ಅಷ್ಟರಲ್ಲಿ ಶಸ್ತ್ರಾಸ್ತ್ರ ಸಜ್ಜಿತರಾದ ಮೂವತ್ತಕ್ಕೂ ಹೆಚ್ಚು ಪೊಲೀಸರಿದ್ದ ತುಕಡಿ ಧಾವಿಸಿತು. ಜೊತೆಗೆ 2 ambulanceಗಳು ಕೂಡ ಬಂದು ನಿಂತವು. ದೇಹದ ತುಂಬೆಲ್ಲಾ ರಕ್ತ ಸೋರುತ್ತಿದ್ದರೂ, ಸಾವಿನ ಕದವನ್ನು ಧಾಟಲು ಹೆಚ್ಚು ಸಮಯ ಬೇಕಿಲ್ಲ ಎಂದು ಗೊತ್ತಿದ್ದರೂ ಇತರರಿಗೆ ಧೈರ್ಯ ಹೇಳುತ್ತಿದ್ದ ಇವನನ್ನು ನೋಡಿದ ಪೊಲೀಸರ ಕಣ್ಣುಗಳಲ್ಲಿ ನೀರು ತುಂಬಿ ಬಂತು. ಅವರೆಲ್ಲರೂ ಒಮ್ಮೆ ಪೊಲೀಸ್ salute ನೀಡಿದರು. ಹ್ಮ್.. ಇವನು ತಿರುಗಿ ಸಲ್ಯೂಟ್ ಮಾಡಲು ನೋಡಿದ. ಆದರೆ ಸಾಧ್ಯವಾಗಲಿಲ್ಲ. ಆಸ್ಪತ್ರೆಯ ಸಿಬ್ಬಂದಿ ಗಾಯಗೊಂಡವರನ್ನು Ambulanceನೊಳಗೆ ಸಾಗಿಸಿದರು. ಇವನ ಬಳಿ ಬಂದಾಗ 'ಸ್ವಲ್ಪ ನಿಲ್ಲಿಸಿ' ಎಂದು ಹೇಳಿ ತನ್ನಷ್ಟಕ್ಕೆ ತಾನೇ ಗೊಣಗಿದ. 'ನನ್ನ ನೋಡಲು ಅವಳು ಬಂದೆ ಬರುತ್ತಾಳೆ. ಅಲ್ಲಿವರೆಗೂ ಕಾಯ್ತಾ ಇರ್ತೀನಿ.", ಎನ್ನುತ್ತಾ ಎಡಗೈಯಲ್ಲಿದ್ದ ವಸ್ತುವಿಗೊಮ್ಮೆ ಮುತ್ತನ್ನಿತ್ತ. ಎಡಗೈಯಲ್ಲಿ ಪ್ರೀತಿಯ ಸಂಕೇತ, ಬಲಗೈಯಲ್ಲಿ ದುಷ್ಟರನ್ನು ಯಮಪುರಿಗಟ್ಟಿದ ಆಯುಧ...

ಮಾಧ್ಯಮಗಳಲ್ಲಿ ಇವನ ಬಗ್ಗೆ ಬಾರಿ ಸುದ್ದಿಯಾಯಿತು. ದೇಶಾದ್ಯಂತ ಇವನ ಕ್ಷೇಮಕ್ಕಾಗಿ ಪ್ರಾರ್ಥನೆಗಳು ನಡೆದವು. ಆದರೆ ಅವಳು ಮಾತ್ರ ಇವನನ್ನು ನೋಡಲು ಬರಲೇ ಇಲ್ಲ. ಅವಳು ಕ್ಯಾಲಿಫೋರ್ನಿಯಾದಲ್ಲಿದ್ದಳು.

**ಸುಮಾರು ಮೂರು ವರ್ಷಗಳ ನಂತರ**

ಆದಿತ್ಯನ ಸಮಾಧಿಯೆದುರು ಬಂದು ನಿಂತಿದ್ದ ಸ್ವಾತಿಯ ಕಣ್ಣುಗಳಿಂದ ಜಾರಿದ ಕಣ್ಣೀರು ಕೈಯಲ್ಲಿದ್ದ ಹೂವಿನ ಮೇಲೆ ಬಿದ್ದಿತ್ತು. ಆ ನೀರಿನಲ್ಲಿ ಆದಿತ್ಯನ ಹೆಸರು ಕೆತ್ತಿದ್ದ ಫಲಕದ ಪ್ರತಿಬಿಂಬ ಕಾಣುತ್ತಿತ್ತು. ಗುಲಾಬಿ ಹೂವನ್ನು ಅವನ ಸಮಾಧಿಯ ಮೇಲಿಟ್ಟಳು. ಇಷ್ಟು ಹೊತ್ತು ಸುಮ್ಮನೆ ಅಪ್ಪನ ಕೈಹಿಡಿದು ನಿಂತಿದ್ದ ನಾಲ್ಕು ವರ್ಷದ ಮಗ ಅಮ್ಮ ಅಳುತ್ತಿರುವುದನ್ನು ನೋಡಿ ಓಡಿಬಂದು 'ಅಮ್ಮಾ..' ಎಂದ..

"ಅಂದು ಅವನು ಹಿಡಿದಿದ್ದ ಹೂವನ್ನು ಸ್ವೀಕರಿಸಿದ್ದರೆ ಅವನ ಆನಂದ ಭಾಷ್ಪ ಉದುರಿದ ಗುಲಾಬಿ ನಿನ್ನ ಮುಡಿಗೇರುತ್ತಿತ್ತು.

ನೀನು ಧಿಕ್ಕರಿಸಿದೆ. ಇಂದು ನಿನ್ನ ಕಣ್ಣುಗಳಿಂದ ಜಾರಿದ ದುಃಖದ ಭಾಷ್ಪ ಸೋಕಿದ ಗುಲಾಬಿ ಅವನ ಸಮಾಧಿಯನ್ನೇರಿದೆ.....!

ನೀನು ಬಂದೆ ಬರುತ್ತೀಯ ಎಂಬ ನಂಬಿಕೆಯೊಂದಿಗೆ ಕಾಯುತ್ತಲೇ ಇದ್ದ ಸಮಾಧಿಯಲ್ಲಿ ಚಿರನಿದ್ರೆಗೈದಮೇಲೂ.

***He's Waiting for his forever love... ನಿನಗಾಗಿ...***"

